ದಿನಾಂಕಃ**18.08.2021** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>**ಪಾಟೀ ಸವಾಲುಃ**</u> ಶ್ರೀ ಎಂ ಕೆ ವಿ ಕೆ 1 ನೇ ಪ್ರತಿವಾದಿ ಪರ ವಕೀಲರಿಂದಃ

3. ನನ್ನ ತಂದೆಯ ಮಕ್ಕಳ ಪೈಕಿ ಲಕ್ಷ್ಮೀಯವರು ಹಿರಿಯವರು. 1 ನೇ ಪ್ರತಿವಾದಿ ಲಕ್ಷ್ಮೀಯವರಿಗಿಂತ ಸುಮಾರು 5 ವರ್ಷ ಕಿರಿಯವರು. 1 ನೇ ಪ್ರತಿವಾದಿಯ ನಂತರ ಸುಮನಾಜಿ ಜನಿಸಿದ್ದು , ಸುಮನಾಜಿಯವರು 1 ನೇ ಪ್ರತಿವಾದಿಗಿಂತ 4-5 ವರ್ಷ ಕಿರಿಯವರು. ನಾನು 1 ನೇ ಪ್ರತಿವಾದಿಗಿಂತ ಸುಮಾರು 8 ವರ್ಷ ಕಿರಿಯವಳು. ನನ್ನ ನಂತರ ಸರಸ್ವತಿಯವರು ಜನಿಸಿದ್ದು , ಸುಮಾರು 3 ವರ್ಷ ಕಿರಿಯವಳು. ಶ್ರೀಧರ ಪಾಂಡ್ಯ ಸರಸ್ವತಿಗಿಂತ ಸುಮಾರು 2 ವರ್ಷ ಕಿರಿಯವರು. ಲಕ್ಷ್ಮೀಯವರಿಗೆ ಯಾವ ವರ್ಷದಲ್ಲಿ ಮದುವೆಯಾಗಿದೆ ಎಂದು ನನಗೆ ನೆನಪಿಲ್ಲ. ಲಕ್ಷ್ಮೀಯವರಿಗೆ ಎಲ್ಲಿ ಮದುವೆಯಾಗಿದೆ ಎಂದು ನನಗೆ ನೆನಪಿಲ್ಲ. ಲಕ್ಷ್ಮೀಯವರ ಮದುವೆಯ ಕಾಲಕ್ಕೆ ನಮ್ಮ ತಂದೆಯವರು ಮೃತಪಟ್ಟಿದ್ದರು. ಲಕ್ಷ್ಮೀಯವರ ಮದುವೆಯ ಕಾಲಕ್ಕೆ 1 ನೇ ಪ್ರತಿವಾದಿ ಕಾಲೇಜಿಗೆ ಹೋಗುತ್ತಿದ್ದರು ಎಂದರೆ ಸರಿ. ನನಗೆ ಯಾವ ಇಸವಿಯಲ್ಲಿ ಮದುವೆಯಾಗಿದೆ ಎಂದು ನನಗೆ ಸರಿಯಾಗಿ ನೆನಪಿಲ್ಲ. ನನಗೆ ಮೂಡಬಿದ್ರೆಯ ಸಮಾಜ ಮಂದಿರದಲ್ಲಿ ಮದುವೆಯಾಗಿದೆ. 1 ನೇ ಪ್ರತಿವಾದಿ , ಸರಸ್ವತಿ ಮತ್ತು ಶ್ರೀಧರ ಪಾಂಡಿಯವರಿಗೆ ಒಂದೇ ದಿನ ಕಾರ್ಕಳದಲ್ಲಿ ಮದುವೆಯಾಗಿದೆ ಎಂದರೆ ಸರಿ. 1979 ರಲ್ಲಿ ಅವರುಗಳು ಮದುವೆ ನಡೆದಿದೆ ಎಂದರೆ ಸಾಕ್ಷಿ ನನಗೆ ಇಸವಿ ನೆನಪಿಲ್ಲ

ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನನಗೆ 1975 ರಲ್ಲಿ ಮದುವೆಯಾಗಿದೆ ಎಂದು ನುಡಿಯುತ್ತಾರೆ. ನನ್ನ ತಾಯಿ 1987 ರಲ್ಲಿ ಮೃತಪಟ್ಟಿದ್ದಾರೆ. ನನ್ನ ತಾಯಿ ದಿನಾಂಕ 21.03.1987 ರಲ್ಲಿ ಮೃತಪಟ್ಟಿದ್ದಾರೆ. ನನ್ನ ಗಂಡನ ಊರು ಉಪ್ಪಿನಂಗಡಿ ತಾಲೂಕು ಕಾಂಚನ ಗ್ರಾಮದ ಮೇಲೂರು . ನನ್ನ ಆಧಾರ ಕಾರ್ಡ್ , ಪಡಿತರ ಚೀಟಿ , ಮತದಾರರ ಗುರುತಿನ ಚೀಟಿ ಇತ್ಯಾದಿಗಳು ನನ್ನ ಗಂಡನ ಆಸ್ತಿಯಾದ ಕಾಂಚನ ಗ್ರಾಮದ ಮೇಲೂರಿಗೆ ಸೇರಿದೆ ಎಂದರೆ ಸರಿಯಲ್ಲ. ನನ್ನ ಆಧಾರ ಕಾರ್ಡ್ , ಪಡಿತರ ಚೀಟಿ ಮತ್ತು ಮತದಾರರ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿಲ್ಲ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ವಕೀಲರಿಗೆ ನನ್ನ ವಿಳಾಸವನ್ನು ನಾನು ನೀಡಿದ್ದೇನೆ. ನಾನು ನ್ಯಾಯಾಲಯಕ್ಕೆ ಎರಡು ಮೂರು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು , ಅದರಲ್ಲಿ ನಾನು ನನ್ನ ಸರಿಯಾದ ವಿಳಾಸವನ್ನು ಕಾಣಿಸಿದ್ದೇನೆ ಎಂದರೆ ಸಾಕ್ಷಿಯು ಹಿಂದಿನ ವಿಳಾಸವನ್ನು ಕಾಣಿಸಿದ್ದು , ಆದರೆ ನಾನು ಮರೋಡಿಯಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ಮೂಡಬಿದ್ರೆ ನ್ಯಾಯಾಲಯದಲ್ಲಿ ಅಸಲು ದಾವೆ 219/2020 ರಂತೆ ದಾವೆ ಇದೆ. ನಾನು ಮೂಡಬಿದ್ರೆ ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ . ಅದು ಅಸಲು ದಾವೆ 155/2019 ಎಂದರೆ ಸಾಕ್ಷಿ ದಾವಾ ಸಂಖ್ಯೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಎರಡು ವ್ಯಾಜ್ಯಗಳು ಕೂಡಾ ಬೆಳ್ತಂಗಡಿ ತಾಲೂಕು ಮರೋಡಿ ಗ್ರಾಮದ ಗುಡ್ಡನಬೆಟ್ಟು ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ಹಾಕಿರುತ್ತಾರೆ. ಮೇಲೆ ಹೇಳಿದ ಎರಡು ದಾವೆಗಳಲ್ಲಿ ಕೂಡಾ ನನ್ನ ವಿಳಾಸ ರಾಜಗಿರಿ ಹೌಸ್ , ಕಾಂಚನ

ಗ್ರಾಮ, ಮೇಲೂರು , ಉಪ್ಪಿನಂಗಡಿ ಎಂದು ಕಾಣಿಸಿದ್ದೇನೆ ಎಂದರೆ ಸರಿ. ನನ್ನ ತಾಯಿ ಮೃತಪಡುವವರೆಗೂ ಸಾಣೂರು ಗ್ರಾಮದ ಚಿಕ್ಕಬೆಟ್ಟು ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸಾಕ್ಷಿ ಪುನಃ ಅವರು ಚಿಕ್ಕಬೆಟ್ಟು ಮನೆಯಲ್ಲಿ ವಾಸವಾಗಿದ್ದರು ಮತ್ತು ಮರೋಡಿ ಗುಡ್ಡನಬೆಟ್ಟು ಮನೆಯಲ್ಲಿ ಕೂಡಾ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ರಿಜ್ಯೋಡರ್ **(Rejoinder)** ಅರ್ಜಿಯನ್ನು ತೋರಿಸಿ , ಅದರಲ್ಲಿರುವ ಸಾಕ್ಷಿಯ ಸಹಿ ಮತ್ತು ಅವರ ತಂಗಿ ಸರಸ್ವತಿ ಎ ಅತಿಕಾರಿಯವರ ಸಹಿಯನ್ನು ತೋರಿಸಲಾಗಿ ಸಾಕ್ಷಿ ಒಪ್ಪಿರುತ್ತಾರೆ. ಅದೇ ರೀತಿ ಅದರಲ್ಲಿ ತನ್ನ ಮಕ್ಕಳಾದ ರಂಜಿತ್ ಕುಮಾರ್ ಮತ್ತು ರಶ್ಮಿಯವರ ಸಹಿಗಳನ್ನು ಗುರುತಿಸಿರುತ್ತಾರೆ. ಮೇಲೆ ಹೇಳಿದ ಸಹಿಗಳನ್ನು ನಾವು ಮರೋಡಿ ಗುಡ್ಡನಬೆಟ್ಟು ಮನೆಯಲ್ಲಿ ಹಾಕಿರುತ್ತೇವೆ. ಸಾಕ್ಷಿಗೆ ಈ ಹಂತದಲ್ಲಿ ಮಧ್ಯಂತರ ಅರ್ಜಿ **10** ರೊಂದಿಗೆ ಲಗತ್ತೀಸಿರುವ ಪ್ರಮಾಣ ಪತ್ರದಲ್ಲಿರುವ ಸಾಕ್ಷಿಯ ಸಹಿಯನ್ನು ತೋರಿಸಲಾಗಿ , ಸಾಕ್ಷಿ ಗುರುತಿಸಿದ್ದು , ಅದನ್ನು ನಾನು ಮರೋಡಿ ಗುಡ್ಡನಬೆಟ್ಟು ಮನೆಯಲ್ಲಿ ಹಾಕಿರುವುದಾಗಿ ನುಡಿಯುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು , ಅದು ಸರಿ ಇದೆ ಎಂದು ಒಪ್ಪಿ ನಾನು ಸಹಿಯನ್ನು ಹಾಕಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ದಿನಾಂಕ **25.03.2019** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ

ಜ್ಞಾಪನಾ ಪತ್ರವನ್ನು ತೋರಿಸಲಾಗಿ, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಯಾವ ವಿಚಾರದಲ್ಲಿ ನಾನು ಸಹಿ ಹಾಕಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ನನಗೆ ಇಂಗ್ಲೀಷ ಓದಲು ಬರುವುದಿಲ್ಲ ಮತ್ತು ಹಲವಾರು ಸಹಿಗಳನ್ನು ನನ್ನಿಂದ ಹಾಕಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ನನ್ನ ಸ್ವಂತ ಇಚ್ಚೆಯಿಂದ ಸಹಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ವಿಚಾರದಲ್ಲಿ ಮತ್ತು ಯಾವ ಉದ್ದೇಶದಿಂದ ಮೇಲೆ ಹೇಳಿದ ಸಹಿಗಳನ್ನು ಹಾಕಿದ್ದೇನೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಸಾಕ್ಷಿ ಪುನಃ ಅದನ್ನು ನನಗೆ ಓದಲು ಬರುವುದಿಲ್ಲ , ಆದರೆ ಓದಿ ಹೇಳಿದಲ್ಲಿ ಯಾವ ಉದ್ದೇಶದಿಂದ ಸಹಿ ಹಾಕಿದ್ದೇನೆ ಎಂದು ಹೇಳಬಲ್ಲೆ ಮತ್ತು ಅದು ನನ್ನ ಸಹಿ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದಾರೆ. ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.